ಕೇಂದ್ರ ಸರ್ಕಾರದಿಂದ ವಿದ್ಯುತ್ ಯೋಜನೆಗಳ ಅನುಮತಿ ಬಗ್ಗೆ

೨೯೪ ಶ್ರೀ ಕೆ. ಪೆಚ್. ಪಾಟೀಲ್ (ಗದಗ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳಿಸಿರುವ ವಿದ್ಯುತ್ ಯೋಜನೆಗಳ ಹೆಸರು ಮತ್ತು ತಗಲುವ ವೆಚ್ಚ (ಸರ್ಕಾರ ಮತ್ತು ಖಾಸಗಿಯವರಿಗೆ ನೀಡಿರುವುದೂ ಸೇರಿದಂತೆ)

ಆ) ಮೇಲಿನ ಯೋಜನೆಗಳ ಒಟ್ಟು ಉತ್ಪಾದನಾ ಸಾಮರ್ಥ್ಯ ಮೆ. ವ್ಯಾ.ಗಳಲ್ಲಿ

ಇ) ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿರುವ ಯೋಜನೆಗಳ ಹೆಸರುಗಳು.

ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಈ ಕೆಳಕಾಣಿಸಿದ ಯೋಜನೆಗಳನ್ನು ಕೇಂದ್ರ ವಿದ್ಯುತ್ ಪ್ರಾಧಿಕಾರಕ್ಕೆ ಅನುಮತಿಗಾಗಿ ಕಳುಹಿಸಲಾಗಿದೆ.

ಆ) ಜಲವಿದ್ಯುತ್ ಯೋಜನೆಗಳು :

೧) ಶಿವನಸಮುದ್ರಂ ಕಾಲಿಕ ವಿದ್ಯುತ್ ಯೋಜನೆ, ಸಾಮರ್ಥ್ಯ ೨೭೦ ಮೆ. ವ್ಯಾಟ್ ಅಂದಾಜು ವೆಚ್ಚ ರೂ. ೧೨೯.೫೦ ಕೋಟಿ

೨) ಕಬಿನಿ ಅಣೆಕಟ್ಟು ವಿದ್ಯುದಾಗಾರ ಸಾಮರ್ಥ್ಯ ೨೦ ಮೆ. ವ್ಯಾಟ್ ಅಂದಾಜು ವೆಚ್ಚ ರೂ. ೨೧ ಕೋಟಿ.

೩) ಆಲಮಟ್ಟಿ ಅಣೆಕಟ್ಟಿ ವಿದ್ಯುದಾಗಾರ ಸಾಮರ್ಥ್ಯ ೨೬೮ ಮೆ. ವ್ಯಾಟ್ ಅಂದಾಜು ವೆಚ್ಚ ರೂ. ೧೫೯ ಕೋಟಿ.

೪) ಬೃಂದಾವನ ವಿದ್ಯುತ್ ಯೋಜನೆ ಸಾಮರ್ಥ್ಯ ೧೨ ಮೆ. ವ್ಯಾಟ್ ಅಂದಾಜು ವೆಚ್ಚ ರೂ. ೧೨.೮೩ ಕೋಟಿ.

೫) ಕಟ್ಟಾ ಮತ್ತು ಪಲ್ಲಾ ನೀರನ್ನು ಸೂಪಾ ಅಣೆಕಟ್ಟಿಗೆ ಅಡ್ಡ ಹಾಯಿಸುವ ಯೋಜನೆ ಉತ್ಪಾದಿಸಬಲ್ಲ ವಿದ್ಯುಚ್ಛಕ್ತಿ ೧೦೦ ದಶಲಕ್ಷ ಯೂನಿಟ್‌ಗಳು ಅಂದಾಜು ವೆಚ್ಚ ರೂ. ೮.೧೩ ಕೋಟಿ.

ಆ) ಶಾಖೋತ್ಪನ್ನ ವಿದ್ಯುತ್ ಯೋಜನೆಗಳು :

೧) ಮಂಗಳೂರು ಬಹು ಇಂದನ ಶಾಖೋತ್ಪನ್ನ ವಿದ್ಯುತ್ ಯೋಜನೆ ಮೊದಲನೆ ಹಂತದ ಸ್ಥಾಪಿತ ಸಾಮರ್ಥ್ಯ ೪೨೦ ಮೆ.ವ್ಯಾಟ್ ಅಂದಾಜು ವೆಚ್ಚ ರೂ. ೬೨೧ ಕೋಟಿ.

೨) ಡೀಸೆಲ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು

ಅ) ಕರ್ನಾಟಕ ಗ್ರಾಮೀಣ ಯೋಜನೆಗಳು (ಡೀಸೆಲ್) ಸಾಮರ್ಥ್ಯ ೨೭.೬ ಮೆ.ವ್ಯಾಟ್ ಅಂದಾಜು ವೆಚ್ಚ ರೂ. ೫೯.೮೦ ಕೋಟಿ

ಆ) ಯಲಹಂಕ ಶಾಖೋತ್ಪನ್ನ ಯೋಜನೆ (ಡೀಸೆಲ್) ಸಾಮರ್ಥ್ಯ ೧೨೦ ಮೆ. ವಾ. ಅಂದಾಜು ವೆಚ್ಚ ರೂ. ೮೩.೬೦ ಕೋಟಿ

ಇ) ಒಟ್ಟು ಉತ್ಪಾದನಾ ಸಾಮರ್ಥ್ಯ ೧೫೯೭.೬ ಮೆ. ವ್ಯಾಟ್‌ಗಳು

ಇ) ಡೀಸೆಲ್ ಶಾಖೋತ್ಪನ್ನ ಯೋಜನೆಗಳ ಹೊರತು ಮೇಲ್ಕಾಣಿಸಿದ ಬೇರೆ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ ದೊರೆತಿರುವುದಿಲ್ಲ. ಈ ಯೋಜನೆಗಳು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಮಂಗಳೂರು ಬಹು ಇಂದನ ಶಾಖೋತ್ಪನ್ನ ಯೋಜನೆಗೆ ಸಂಬಂಧಪಟ್ಟ ಇತರ ಇಲಾಖೆಗಳಿಂದ ಅನುಮೋದನೆ ಪಡೆಯುವ ಷರತ್ತುಗಳ ಮೇರೆಗೆ ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು ತಾತ್ಪರ್ತಿಕ ಅನುಮೋದನೆ ನೀಡಿದೆ.

ಶ್ರೀ ಕೆ ಪೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ತಾವು ಎಲ್ಲಾ ಯೋಜನೆಗಳೂ ಕೇಂದ್ರ ಸರಕಾರದ ಪರಿಶೀಲನೆಯಲ್ಲಿವೆ ಎಂದೂ ಹೇಳಿದಿರಿ. ಹಾಗಾದರೆ ಯಾವುದೂ ಇನ್ನೂ

ಮಂಜೂರಾಗಿ ಬರಲಿಲ್ಲವೇ ? ಆಮೇಲೆ ಹಣದ ಸಲುವಾಗಿ ಏನಾದರೂ ವ್ಯವಸ್ಥೆ ಮಾಡಿರುತ್ತೀರಾ ? ಇವತ್ತು ಅವರು ಮಂಜೂರಾತಿ ಕೊಟ್ಟರೆ ಅದನ್ನು ಪೂರೈಸುವುದಕ್ಕೆ ಏನಾದರೂ ಹಣದ ವ್ಯವಸ್ಥೆ ಮಾಡಿಕೊಂಡಿರುತ್ತೀರಾ ? ಮಾಡಿಕೊಳ್ಳದಿದ್ದರೆ ಅದನ್ನು ಯಾವ ರೀತಿ ನಿಭಾಯಿಸುತ್ತೀರಿ ? ಇದು ಒಂದು. ಎರಡನೆಯದಾಗಿ ಇನ್ನೂ ಕೇಂದ್ರ ಸರಕಾರದ ಪರಿಶೀಲನೆಯ ಹಂತದಲ್ಲಿರುವ ಯೋಜನೆಗಳ ಪೂರ್ಣಮಂಜೂರಾತಿಗಾಗಿ ತಾವು ಏತಕ್ಕೆ ಒತ್ತಾಯ ತಂದಿಲ್ಲ. ಮೊನ್ನೆದಿನ ನಾವು ದೆಹಲಿಗೆ ಹೋದಾಗ ಪೈಪಮ್ ಮಿನಿಸ್ಟರ್‌ರವರು ಹೇಳಿದರು, ಕರ್ನಾಟಕಕ್ಕೆ ಬೇಕಾದಂಥ ವಿದ್ಯುತ್ ಸೌಕರ್ಯಕ್ಕೆ ನಾವು ಗಮನ ಕೊಡುತ್ತೇವೆ. ಐದು ಯೋಜನೆಗಳ ಬಗ್ಗೆ ಹೇಳಿದಹಾಗೆ ನನಗೆ ನೆನಪಿದೆ. ಕರ್ನಾಟಕದಲ್ಲಿ ಇನ್ನೂ ೨೦-೨೫ ವರ್ಷಗಳಿಗೆ ಸಾಕಾಗುವಷ್ಟು ಎಲೆಕ್ಟ್ರಿಸಿಟಿ ಇದರಿಂದ ಸಿಗುತ್ತದೆ. ಆ ಎಲೆಕ್ಟ್ರಿಸಿಟಿಯನ್ನು ನಾವು ಉತ್ಪಾದಕರಿಗೂ ಸಹ ತರಬೇಕಾಗುತ್ತದೆ. ಇದರ ಬಗ್ಗೆ ಯೋಜನೆ ಮಾಡುವುದಕ್ಕೆ ಹತ್ತಿದ್ದೇವೆ ಎಂದು ಹೇಳಿದರು. ಅವರು ಇಷ್ಟೊಂದು ಉತ್ಸಾಹದಿಂದ ಇರುವಾಗ, ತಾವು ಇನ್ನಷ್ಟು ತಮ್ಮ ಪರ್ಚಸ್ಸನ್ನು ಉಪಯೋಗ ಮಾಡಿ ಶೀಘ್ರವಾಗಿ ಸ್ಯಾಂಕ್ಷನ್ ಮಾಡಿಸಿಕೊಳ್ಳುವುದಕ್ಕೆ ನಿಜವಾಗಲೂ ಪ್ರಯತ್ನ ಮಾಡುತ್ತೀರಾ ? ಇನ್ನು ಮೂರನೆಯದಾಗಿ ಈಗಿರುವ ಎಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಷನ್ ಸಹ ಸರಿಯಾಗಿಲ್ಲ. ಬಹಳಷ್ಟು ಕಳ್ಳತನವಾಗುತ್ತಿದೆ, ಪೋಲಾಗಿ ಹೋಗುತ್ತಿದೆ. ಅದನ್ನು ಬಂದ್ ಮಾಡುವುದಕ್ಕೆ ತಾವು ಪ್ರಯತ್ನ ಮಾಡಿಲ್ಲ ಎಂಬುದರ ಬಗ್ಗೆ ಸ್ಪಷ್ಟವಾದ ನಿದರ್ಶನ ಇದೆ. ಯಾರು ಪ್ರಾಮಾಣಿಕವಾಗಿ ಕೊಡುತ್ತಾರೆ ಅವರಿಗೆ ಇನ್ನೂ ಹೆಚ್ಚು ಬೀಳ ಹಾಕುತ್ತೀರಿ, ದಂಡ ಹಾಕುತ್ತೀರಿ, ಬಡ್ಡಿ ಹಾಕುತ್ತೀರಿ. ಯಾರು ಪ್ರಾಮಾಣಿಕತೆಯಿಂದ ಕೊಡುತ್ತಿಲ್ಲ ಅಂತಹವರಿಗೆ ಏನೂ ಮಾಡದೇ ಹೋಗಿದ್ದೀರಿ. ಇದಕ್ಕೆ ಸರಕಾರಕ್ಕಿಂತ ಹೆಚ್ಚು ಅಲ್ಲಿ ಕೆಲಸ ಮಾಡುವ ಕಾರ್ಮಿಕರು ಕಾರಣರಾಗಿದ್ದಾರೆ, ಇದರ ಮೇಲೆ ತಾವು ಯಾವ ತರಹದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್ — ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಿಳಿಸಿರುವ ಹಾಗೆ ಕೇಂದ್ರ ಸರಕಾರದ ಅನುಮತಿಗಾಗಿ ಕಳುಹಿಸಿರತಕ್ಕಂಥ ಕೆಲವು ಯೋಜನೆಗಳು ಇವೆ. ಅನುಮತಿ ಪಡೆದಿರತಕ್ಕಂಥ ಯೋಜನೆಗಳೂ ಕೆಲವು ಇದ್ದಾವೆ. ಅದು ಹೈಡಲ್ ಇರಬಹುದು, ಥರ್ಮಲ್ ಇರಬಹುದು. ನಾನು ಮೊದಲು ಕೊಟ್ಟಿರುವ ಜಲವಿದ್ಯುತ್ ಯೋಜನೆಗಳಲ್ಲಿ ಕೆಲವು ದೊಡ್ಡ ಯೋಜನೆಗಳು ಇವೆ. ಕೆಲವು ಸಣ್ಣ ಯೋಜನೆಗಳು ಇವೆ. ಅವುಗಳ ಕ್ಲಿಯರೆನ್ಸ್‌ಗೆ ಏತಕ್ಕೆ ತಡವಾಗುತ್ತಿದೆ. ಎಂದರೆ, ಯಾವುದೇ ಒಂದು ಹೈಡಲ್ ಪ್ರಾಜೆಕ್ಟ್ ಹಾಕಬೇಕೆಂದರೂ, ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್, ಫಾರೆಸ್ಟ್ ಕ್ಲಿಯರೆನ್ಸ್ ಆಗಬೇಕು. I am disgusted with that kind of delay. I don't accuse anybody. ಒಂದು ಯೋಜನೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಗೆ ಸೇರಿಸಿ ಕಳುಹಿಸಬೇಕೆಂದು ಹೇಳಿದರೂ ಈಗಿನಿಂದಲೇ ನಾವು ಮಾಡಬೇಕು ಕ್ಲಿಯರ್ ಆಗಿರುವ ಯೋಜನೆಗಳ ಬಗ್ಗೆ ನನ್ನದೇನೂ ಕಂಪ್ಲೇಂಟ್ ಇಲ್ಲ. ದುಡ್ಡು ಎಲ್ಲಿಂದ ತರುತ್ತೀರಿ ಎಂದು ಕೇಳಿದ್ದಾರೆ ನಾನು ಅದನ್ನು ಒಪ್ಪುತ್ತೇನೆ. ದುಡ್ಡು ಬೇಕು. ಥರ್ಮಲ್ ಇರಲಿ, ಹೈಡಲ್ ಇರಲಿ, ಯಾವುದೇ ವಿದ್ಯುತ್ ಯೋಜನೆಗಳಿಗೆ ಕೇಂದ್ರ ಸರಕಾರದ ನೀತಿ ಏನು ಎಂದು ಹೇಳಿದರೆ, ಪಬ್ಲಿಕ್ ಸೆಕ್ಟರ್‌ಗೆ ಪ್ರೈವೇಟ್ ಇನ್‌ವೆಸ್ಟ್‌ಮೆಂಟ್ ಅಲೋ ಮಾಡುತ್ತೇವೆಂದು ಹೇಳಿದ್ದಾರೆ ಮಾನ್ಯ ಸಾತೆಯವರೂ ಹೇಳಿದರು. ನಾನು ಮಾನ್ಯ ಸಾತೆಯವರನ್ನು ಅಭಿನಂದಿಸಬೇಕಾಗಿದೆ. ಅವರು ನಮ್ಮ ರಾಜ್ಯದ ಯೋಜನೆಗಳ ಬಗ್ಗೆ ತುಂಬಾ ಸಹಾನುಭೂತಿಯಿಂದ ಇದ್ದಾರೆ. ಯಲಹಂಕದ್ದು ಮಾಡಿಕೊಳ್ಳಿ ಎಂದು ಹೇಳಿದರು. ಅದು ಏನಾಗಿದೆ ಎಂದರೆ, ನಾವು ಯಾವುದೇ ಪೋಟೆನ್ಷಿಯಲ್ ಆಬ್ಜೆಕ್ಟ್ ಮಾಡುವುದಿಲ್ಲ. ಯಲಹಂಕ ಪ್ರಾಜೆಕ್ಟ್ ವಿಚಾರ ಹೇಳುತ್ತೇನೆ, ಒಂದು ಐದು ನಿಮಿಷ ಆಗಬಹುದು. ಏನು ಆಯಿತು ಎಂದರೆ. ಈ ಪ್ರಾಜೆಕ್ಟ್‌ನ್ನು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಯವರು ಕ್ಲಿಯರ್‌ಮಾಡಿದರು, ಇದು ಕೆ.ಇ.ಬಿ.ಪ್ರಾಜೆಕ್ಟ್ ಇದರಿಂದ ೧೨೦ ಮೆಗಾವ್ಯಾಟ್ ಸಿಗುತ್ತದೆ. ಮೆಷೀನ್ ಎಲ್ಲಾ ಸೇರಿಕೊಂಡು ೮೫ ಕೋಟಿ ರೂಪಾಯಿ ಆಗುತ್ತದೆ. ಈ ೮೫ ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಂತೆ ಫಾರಿನ್ ಎಕ್ಸ್‌ಚೇಂಜ್ ರಿಲೀಸ್ ಮಾಡಬೇಕೆಂದು ಹೇಳಿದರೆ ಫೈನಾನ್ಸ್‌ನವರು ಒಪ್ಪಲಿಲ್ಲ.

ಎನರ್ಜಿ ಮಿನಿಸ್ಟ್ರಿಯವರು ತಕ್ಷಣ ಅಪ್ರೂವ್ ಮಾಡಿದರು. ಅವರು ಅಪ್ರೂವ್ ಮಾಡಿ ಸುಮಾರು ಎರಡೂವರೆ ವರ್ಷಗಳಾದವು. ಆದರೂ ಇನ್ನೂ ಅಪ್ರೂವ್ ಆಗಿಲ್ಲ. ಏತಕ್ಕೆ ಅಪ್ರೂವ್ ಆಗಿಲ್ಲವೆನ್ನುವುದನ್ನು ನಾನು ಹೇಳುತ್ತೇನೆ. ಫಾರಿನ್ ಎಕ್ಸ್‌ಚೇಂಜ್ ಒಂದೇ ಸಾರಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ೫೫ ಫಾರಿನ್ ಎಕ್ಸ್‌ಚೇಂಜ್ ೫೫ ಕೋಟಿ ರೂಪಾಯಿಗಳನ್ನು ಜರ್ಮನಿಯಿಂದ ಜಪಾನಿನಿಂದ ಈಗಲೇ

ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಯಾವುದೇ ಒಂದು ಸ್ಟೇಟ್ ಗೌರ್ಮೆಂಟ್ ಒಂದೇ ವರ್ಷದಲ್ಲಿ ೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯ ವಿದೆಯೇ ? ಪ್ರೈವೇಟ್‌ನವರಿಗೆ ಆದರೆ ಬೇರೆ ಫೆಸಿಲಿಟೀಸ್ ಕೊಡುತ್ತಾರೆ. Creditors deferred payment system, soft loan system ಇವೆಲ್ಲಾ ಇವೆ. ಆದರೆ ಕೆ.ಇ.ಬಿ. ಯವರಿಗೆ ಏತಕ್ಕೆ ಕೊಡುವುದಿಲ್ಲವೆಂದು ಕೇಳಿದಾಗ ಏನೂ ಉತ್ತರ ಕೊಡಲಿಲ್ಲ. ಈಗ ಎರಡು ಮೂರು ವಾರಗಳ ಹಿಂದೆ ಕೇಳಿದಾಗ ಪರ್ಮಿಶನ್ ಕೊಡುತ್ತೇವೆಂದು ಹೇಳಿದ್ದಾರೆ. That is one project after 2½ years it is being implemented now. ಹಣ ಕೊಡುವುದಕ್ಕೆ ತಯಾರು ಇದ್ದಾರೆ NRI people they are prepared to offer 600 crores. ನಾವು ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಏನೂ ಮಾಡುವಂತೆ ಇಲ್ಲ. ಇವೆಲ್ಲಾ ಕೆಲವು ಪ್ರೊಸೀಜರ್ಸ್ ಇವೆ. ನಾನು ಇನ್‌ಟೆನ್‌ಷನಲ್ ಆಗಿ ಏನೂ ಹೇಳುತ್ತಿಲ್ಲ. ಈಗ ನಮ್ಮ ಪ್ರಪಂಚದಲ್ಲಿ ಬೇಕಾದಷ್ಟು ಹಣ ಇದೆ. ಮಾನ್ಯ ಹಿರಿಯ ಸದಸ್ಯರಿಗೆ ಒಂದು ಮಾತು ಹೇಳಬಯಸುತ್ತೇನೆ, ಅದೇನೆಂದರೆ, Actually, Mr. Sathe wanted to take up this project as immediately as possible. Money is available in the world, plenty of money is available, How to use how to make production. We have to go through only Government of India. We cannot depend on any other agency.

ಶ್ರೀ ಮಹಮದ್ ಲೈಕುದ್ದೀನ್.—ಸಾರ್.....

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ ಕುಳಿತುಕೊಳ್ಳಿ. ಈ ರೀತಿ ಆದರೆ ನಾನು ಉಳಿದ ಪ್ರಶ್ನೋತ್ತರ ಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ. ಇಲ್ಲ ಆಗುವುದಿಲ್ಲ. ಕುಳಿತುಕೊಳ್ಳಿ. ತಾವು ಕೇಳಿ ಮೂಡಲ ಗಿರಿಯಪ್ಪನವರೇ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ. ನಾವು ಹಿಂದೆ ಕುಳಿತಿದ್ದೇವೆಂದು ಈ ರೀತಿ ತಾರತಮ್ಯ ಮಾಡಿದರೆ ಹೇಗೆ. ಅವಕಾಶ ಕೊಡಿ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಮೂಡಲಗಿರಿಯಪ್ಪನವರೇ ತಾವು ಪ್ರಶ್ನೆ ಕೇಳಿ. ಈ ರೀತಿ ಆದರೆ ನಾನು ಉಳಿದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ.

ಶ್ರೀ ಮಹಮದ್ ಲೈಕುದ್ದೀನ್.—ಮಿಸ್ಟರ್ ಸ್ಪೀಕರ್ ಸಾರ್.....

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ. ತಾವು ಕುಳಿತುಕೊಳ್ಳಿ. ಇನ್ನು ೧೦ ಪ್ರಶ್ನೆಗಳು ಇವೆ. ಅವುಗಳನ್ನು ಲ್ಯಾಪ್ಸ್‌ಮಾಡಬೇಕಾಗುತ್ತದೆ. ಆಗುವುದಿಲ್ಲ ಕುಳಿತುಕೊಳ್ಳಿ.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದು

೪೧೯. ಶ್ರೀ ಸಿ.ಪಿ.ಮೂಡ್ಲಗಿರಿಯಪ್ಪ(ಶಿರಾ).—ಮಾನ್ಯ ಭಾರಿ ಮತ್ತು ಮಾಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕದಲ್ಲಿ ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಸುಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು ಹಾಗೂ ಸುಟ್ಟು ಹೋದ ಟ್ರಾನ್ಸ್‌ಫಾರ್ಮರುಗಳ ಒಟ್ಟು ಮೌಲ್ಯ ಎಷ್ಟಾಗುತ್ತದೆ ? ಇದರಿಂದ ಸರಕಾರದವರಿಗಾಗಿರುವ ನಷ್ಟವೆಷ್ಟು ?

ಆ) ಇದನ್ನು ತಡೆಗಟ್ಟಲು ಸರ್ಕಾರದವರು ಶಾಶ್ವತ ಕ್ರಮ ಕೈಗೊಳ್ಳುವರೆ ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಕರ್ನಾಟಕದಲ್ಲಿ ೧೯೮೬-೮೭ರ ಸಾಲಿನಲ್ಲಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು, ೧೯೮೭-೮೮ರಲ್ಲಿ ೭,೧೩೫ ವಿತರಣಾ ಟ್ರಾನ್ಸ್‌ಫಾರ್ಮರುಗಳೂ ಕೆಟ್ಟು ಹೋದವು. ಇವುಗಳ ಪೈಕಿ ದುರಸ್ತಿ ಮಾಡಲು ಸಾಧ್ಯವಾದ ಟ್ರಾನ್ಸ್‌ಫಾರ್ಮರುಗಳನ್ನೆಲ್ಲಾ ದುರಸ್ತಿ ಮಾಡಿ ಪುನಃ ಬಳಸಲಾಗಿದೆ. ಹೆಚ್ಚು ನೋಷವಿರುವ